# Rail Infrastructure Development Company (Karnataka) Limited

*(A Joint Venture of Govt. of Karnataka & Ministry of Railways)*

**KRIDE/PRW/PR/2026/01** ಬೆಂಗಳೂರು

**21-01-2026**

## ಮಾಧ್ಯಮ ಪ್ರಕಟಣೆ

### ಕ-ರೈಡ್ ನಿಂದ ನಾಗರಿಕ–ಪಾಲುದಾರರ ಸಂಪರ್ಕ ಕಾರ್ಯಕ್ರಮ ಆಯೋಜನೆ

ರೈಲು ಮೂಲಸೌಕರ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ಲಿಮಿಟೆಡ್ (ಕ-ರೈಡ್) ಇಂದು ನಾಗರಿಕ-ಹಿತಾಸಕ್ತಿದಾರರ ಸಂಪರ್ಕ ಕಾರ್ಯಕ್ರಮವನ್ನು ಕ-ರೈಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಲಕ್ಷ್ಮಣ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಆಯೋಜಿಸಿತು. ಪಾರದರ್ಶಕತೆ, ಭಾಗವಹಿಸುವಿಕೆಯನ್ನು ಆಧರಿಸಿದ ಹಾಗೂ ನಾಗರಿಕ ಕೇಂದ್ರಿತ ಮೂಲಸೌಕರ್ಯ ಅಭಿವೃದ್ಧಿಗೆ ತನ್ನ ಬದ್ಧತೆಯನ್ನು ಈ ಕಾರ್ಯಕ್ರಮದ ಮೂಲಕ ಕ-ರೈಡ್ ಪುನರುಚ್ಚರಿಸಿತು.

ಕಾರ್ಯಕ್ರಮದಲ್ಲಿ ಶ್ರೀ ರಾಜೇಶ್ ಕುಮಾರ್ ಸಿಂಗ್, ನಿರ್ದೇಶಕರು (ಯೋಜನೆಗಳು ಮತ್ತು ಯೋಜನಾ ರೂಪಣೆ) ಹಾಗೂ ಶ್ರೀ ಅವಧೇಶ್ ಮೆಹ್ತಾ, ನಿರ್ದೇಶಕರು (ವ್ಯವಹಾರ ಅಭಿವೃದ್ಧಿ ಮತ್ತು ಹಣಕಾಸು) ಸೇರಿದಂತೆ ಕ-ರೈಡ್‌ನ ಇತರ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ಬೆಂಗಳೂರು ಉಪನಗರ ರೈಲು ಯೋಜನೆ (ಬಿಎಸ್‌ಆರ್‌ಪಿ) ಕುರಿತು ಪ್ರಗತಿಯ ಮಾಹಿತಿ ತಿಳಿಯಲು ಗಣ್ಯ ನಾಗರಿಕ ಸಂಘಟನೆಗಳು, ನಿವಾಸಿ ಕಲ್ಯಾಣ ಸಂಘಟಣೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳ (ಎನ್‌ಜಿಒಗಳು) ಪ್ರತಿನಿಧಿಗಳು ಉತ್ಸಾಹದಿಂದ ಪಾಲ್ಗೊಂಡರು.

ಕಾರ್ಯಕ್ರಮದ ವೇಳೆ ಕ-ರೈಡ್ ಯೋಜನೆಗಳ ಪ್ರಸ್ತುತ ಸ್ಥಿತಿ, ಸಾಧನೆಗಳು ಮತ್ತು ಮುಂದಿನ ಪ್ರಮುಖ ಹಂತಗಳ ಕುರಿತು ವಿವರವಾದ ಪ್ರಸ್ತುತೀಕರಣಗಳು ಹಾಗೂ ಚರ್ಚೆಗಳು ನಡೆದವು. ಯೋಜನಾ ಅವಧಿ, ರೂಪುರೇಷೆಗಳು ಮತ್ತು ಅನುಷ್ಠಾನದಲ್ಲಿ ಎದುರಾಗುವ ಸವಾಲುಗಳ ಬಗ್ಗೆ ನಾಗರಿಕರಿಗೆ ಸಮಗ್ರ ಮಾಹಿತಿ ನೀಡಲಾಯಿತು. ಬಳಿಕ ಮುಕ್ತ ಸಂವಾದ ವೇದಿಕೆಯ ಮೂಲಕ ಸಾರ್ಥಕ ಚರ್ಚೆಗೆ ಅವಕಾಶ ಕಲ್ಪಿಸಲಾಯಿತು. ಸಭೆಯಲ್ಲಿ ಭಾಗವಹಿಸಿದವರಿಂದ ವ್ಯಕ್ತವಾದ ಅಭಿಪ್ರಾಯಗಳು, ಸಲಹೆಗಳು ಮತ್ತು ಗಮನಾರ್ಹ ಅಂಶಗಳನ್ನು ಕ-ರೈಡ್ ಗಮನದಿಂದ ಆಲಿಸಿ ದಾಖಲಿಸಿಕೊಂಡಿತು. ಈ ಹಿತಾಸಕ್ತಿದಾರರ ಸಭೆ, ಯೋಜನೆಗಳ ಅನುಷ್ಠಾನದಲ್ಲಿ ಕ-ರೈಡ್ ಅನುಸರಿಸುತ್ತಿರುವ ಸಮನ್ವಯ ದೃಷ್ಟಿಕೋನವನ್ನು ಮತ್ತಷ್ಟು ಬಲಪಡಿಸಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಲಕ್ಷ್ಮಣ್ ಸಿಂಗ್ ವ್ಯವಸ್ಥಾಪಕ ನಿರ್ದೇಶಕರು, ಕ-ರೈಡ್,

"ಕ-ರೈಡ್‌ನ ಹೊಣೆಗಾರಿಕೆ ಕೇವಲ ರೈಲು ಮೂಲಸೌಕರ್ಯ ನಿರ್ಮಾಣಕ್ಕೆ ಸೀಮಿತವಲ್ಲ. ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನಾಗರಿಕರೊಂದಿಗೆ ನಿರಂತರ ಸಂವಹನದ ಮೂಲಕ ಸಾರ್ವಜನಿಕ ವಿಶ್ವಾಸವನ್ನು ನಿರ್ಮಿಸುವುದು ನಮ್ಮ ಕರ್ತವ್ಯವೂ ಹೌದು. ಉಪನಗರ ರೈಲು ಯೋಜನೆಯನ್ನು ಜನಕೇಂದ್ರಿತ ಚಲನವಲನ ಪರಿಹಾರವಾಗಿ ರೂಪಿಸಲಾಗುತ್ತಿದೆ. ಹಿತಾಸಕ್ತಿದಾರರ ಸಕ್ರಿಯ ಭಾಗವಹಿಸುವಿಕೆ ಯೋಜನೆಯ ಗುಣಮಟ್ಟವನ್ನು ಹೆಚ್ಚಿಸುವುದರ ಜೊತೆಗೆ ದೀರ್ಘಕಾಲಿಕ ಸ್ಥಿರತೆಯನ್ನು ಖಚಿತಪಡಿಸುತ್ತದೆ," ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ರಾಜೇಶ್ ಕುಮಾರ್ ಸಿಂಗ್, ನಿರ್ದೇಶಕರು (ಯೋಜನೆಗಳು ಮತ್ತು ಯೋಜನಾ ರೂಪಣೆ),

"ನಾಗರಿಕರು ಮತ್ತು ಹಿತಾಸಕ್ತಿದಾರರೊಂದಿಗೆ ನಿರಂತರ ಸಂವಾದವು ಯೋಜನೆಗಳ ರೂಪಣೆ ಮತ್ತು ಅನುಷ್ಠಾನವನ್ನು ಇನ್ನಷ್ಟು ಸುಧಾರಿಸಲು ನೆರವಾಗುತ್ತದೆ. ಇಂತಹ ಸಂವಹನಗಳ ಮೂಲಕ ದೊರಕುವ ರಚನಾತ್ಮಕ ಸಲಹೆಗಳು ಸಮಸ್ಯೆಗಳನ್ನು ಮುಂಚಿತವಾಗಿ ಪರಿಹರಿಸಲು ಸಹಕಾರಿಯಾಗುತ್ತವೆ ಹಾಗೂ ಯೋಜನೆಯ ಒಟ್ಟಾರೆ ಗುಣಮಟ್ಟ ಮತ್ತು ಪರಿಣಾಮಕಾರಿತ್ವವನ್ನು ಹೆಚ್ಚಿಸುತ್ತವೆ. ಸಾಧ್ಯವಾದ ಎಲ್ಲ ಕಡೆ ಈ ಸಲಹೆಗಳನ್ನು ಅರ್ಥಪೂರ್ಣವಾಗಿ ಯೋಜನಾ ಪ್ರಕ್ರಿಯೆಗಳಲ್ಲಿ ಅಳವಡಿಸಿಕೊಳ್ಳಲಾಗುವುದು," ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀ ಲಕ್ಷ್ಮಣ್ ಸಿಂಗ್, ವ್ಯವಸ್ಥಾಪಕ ನಿರ್ದೇಶಕರು, ಕ-ರೈಡ್, ಸಂಸ್ಥೆಯ ಸುದ್ದಿಪತ್ರ "ಸಂಪರ್ಕ (SAMPARKA)"ದ ಇತ್ತೀಚಿನ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಸಂಪರ್ಕ ಪತ್ರಿಕೆಯು ಕ ರೈಡ್‌ನ ಯೋಜನೆಗಳ ಪ್ರಗತಿ, ಪ್ರಮುಖ ಸಾಧನೆಗಳು ಮತ್ತು ನಾಗರಿಕ ಕೇಂದ್ರಿತ ಉಪಕ್ರಮಗಳ ಕುರಿತು ನಿಯಮಿತ ಮಾಹಿತಿಯನ್ನು ನೀಡುವ ಉದ್ದೇಶ ಹೊಂದಿದ್ದು, ನಾಗರಿಕರು ಹಾಗೂ ಪಾಲುದಾರರೊಂದಿಗೆ ಸಂವಹನ, ಪಾರದರ್ಶಕತೆ ಮತ್ತು ಸಂಪರ್ಕವನ್ನು ಬಲಪಡಿಸುವ ಮಹತ್ವದ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

[ಇಲ್ಲಿ ಕ್ಲಿಕ್ ಮಾಡಿ: [https://kride.in/samparka-newsletter/]

ಇನ್ನು ನಾಗರಿಕ ಪಾಲುದಾರರ ಕಾರ್ಯಕ್ರಮವು, ವಿಶ್ವಾಸ, ಪಾರದರ್ಶಕತೆ ಮತ್ತು ಸಮೂಹ ಪಾಲುದಾರಿಕೆಯನ್ನು ಆಧಾರವಾಗಿಸಿಕೊಂಡ ನಗರ ಚಲನವಲನ ಮೂಲಸೌಕರ್ಯ ನಿರ್ಮಾಣಕ್ಕೆ ಕ-ರೈಡ್ ಬದ್ಧವಾಗಿದೆ ಎಂಬುದನ್ನು ಮತ್ತೊಮ್ಮೆ ನಾಗರಿಕರಲ್ಲಿ ದೃಢಪಡಿಸಿತು. ಬೆಂಗಳೂರಿಗೆ ವಿಶ್ವಾಸಾರ್ಹ, ಪರಿಣಾಮಕಾರಿ ಮತ್ತು ದೀರ್ಘಕಾಲಿಕ ಉಪನಗರ ರೈಲು ವ್ಯವಸ್ಥೆಯನ್ನು ಒದಗಿಸುವ ದಿಶೆಯಲ್ಲಿ ಕ-ರೈಡ್ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ.

**-ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ**

**- ಕ-ರೈಡ್**